7. **ಮುಲ್ಕಿ ಪಟ್ಟಣ ಪಂಚಾಯತ್** : ರಸ್ತೆಗಳು, ದಾರಿ ದೀಪಗಳು, ಕುಡಿಯುವ ನೀರು, ಅಕ್ಷರ ದಾಸೋಹ ಅಡುಗೆ ಕೋಣೆ ನಿರ್ಮಾಣ ಕಾಮಗಾರಿಗಳು.

ಈ) ಬೆಳ್ತಂಗಡಿ ಪಟ್ಟಣ ಪಂಚಾಯತ್‌ಗೆ 2004–05ನೇ ಸಾಲಿನಲ್ಲಿ 11ನೇ ಹಣಕಾಸು ಯೋಜನೆಯಡಿ ರೂ.37.28 ಲಕ್ಷಗಳು ಬಿಡುಗಡೆಯಾಗಿದ್ದು, ಈ ಕೆಳಗಿನಂತೆ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ರೂಪಾಯಿಗಳು
1.	ಕುಡಿಯುವ ನೀರಿನ ವ್ಯವಸ್ಥೆ	77,000/–
2.	ಮಳೆಗಾಲದ ನೀರು ಹರಿದು ಹೋಗುವ ಚರಂಡಿ ಯೋಜನೆ	17,54,840/–
3.	ಅಕ್ಷರ ದಾಸೋಹ ಅಡುಗೆ ಕೋಣೆ ನಿರ್ಮಾಣ	205,784/–
4.	ಬೀದಿ ದೀಪಗಳಿಗಾಗಿ	3,88,699/–
5.	ರಸ್ತೆ ಅಭಿವೃದ್ಧಿ	13,79,970/–
	ಒಟ್ಟು	**3,806,293/–**

2005–06ನೇ ಸಾಲಿನಲ್ಲಿ 12ನೇ ಹಣಕಾಸು ಆಯೋಗದ ಅನುದಾನ ರೂ. 2.43 ಲಕ್ಷ ಬಿಡುಗಡೆಯಾಗಿದೆ.

ಉ)ಸರ್ಕಾರವು ಯಾವುದೇ ಯೋಜನೆಯನ್ನು ಹಮ್ಮಿಕೊಂಡಿರುವುದಿಲ್ಲ.

32, (98) ಶ್ರೀ ಎಸ್.ರಾಜೇಂದ್ರನ್(ಕೆ.ಜಿ.ಎಫ್) : ಮಾನ್ಯ ಸಾರಿಗೆ ಸಚಿವರುಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಸಾರಿಗೆ ಇಲಾಖೆ ಹಾಗೂ ಸಾರಿಗೆ ಇಲಾಖೆ ಅಡಿಯಲ್ಲಿ ಬರುವ ಕಂಪೆನಿ, ನಿಗಮ ಹಾಗೂ ಮಂಡಳಿಗಳಲ್ಲಿ ಗುರುತಿಸಲಾಗಿರುವ ಹಿಂಬಾಕಿ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹಾಗಿದ್ದಲ್ಲಿ ಈ ಹುದ್ದೆಗಳು ತುಂಬದಿರಲು ಕಾರಣವೇನು?

ಶ್ರೀ ಎನ್. ಚಲುವರಾಯಸ್ವಾಮಿ ಸಾರಿಗೆ ಸಚಿವರುಗಳು

ಅ) ಸಾರಿಗೆ ಇಲಾಖೆ ಮತ್ತು ಸಾರಿಗೆ ಸಂಸ್ಥೆಗಳಾದ ವಾಯುವ್ಯ ಕರ್ನಾಟಕರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಇದ್ದ ಬ್ಯಾಕ್‌ಲಾಗ್ (ಪ.ಜಾ ಮತ್ತು ಪ.ಪಂ.) ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು ಈಗ ಬಾಕಿ ಇರುವುದಿಲ್ಲ.

ಆ) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಈ ಹಿಂದೆ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಈಗ 251 ಬ್ಯಾಕ್‌ಲಾಗ್

ಹುದ್ದೆಗಳು ಇದ್ದು ಇವುಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಈ ಹಿಂದೆ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಈಗ 40 ಬ್ಯಾಕ್‌ಲಾಗ್ (ಪ.ಜಾ) ಹುದ್ದೆಗಳು ಬಾಕಿ ಇರುತ್ತದೆ. ದಿನಾಂಕ:02.02.2006 ಪ್ರಕಟಿಸಿರುವ ಚಾಲಕ ಕಂ ನಿರ್ವಾಹಕ ಹುದ್ದೆಯ ಆಯ್ಕೆ ಸಂದರ್ಭದಲ್ಲಿ ಈ ಬ್ಯಾಕ್‌ಲಾಗ್ ಹುದ್ದೆಗಳ ಕೊರತೆ ಗುರುತಿಸಲಾಗಿದ್ದು ಈ ಹುದ್ದೆಗಳನ್ನು ಭರ್ತಿ ಮಾಡಲು ಸದ್ಯದಲ್ಲೆ ಕ್ರಮ ಕೈಗೊಳ್ಳಲಾಗುವುದು.

34, (100) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) Whether the Government has conducted any Survey to identify the areas where deposits of various kinds of Minerals, which are available in the State (Area wise and Mineral wise details be furnished);

ಆ) If not, action taken by the Government ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಹೌದು.

ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿವಿಧ ಖನಿಜಗಳಿಗಾಗಿ ಅನ್ವೇಷಣೆ ಕಾರ್ಯ ಕೈಗೊಳ್ಳುತ್ತಾ ಬಂದಿದೆ. ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ಅನ್ವೇಷಣೆಗಳನ್ನು ಕೈಗೊಳ್ಳಲಾಗಿದೆ.

2002–2003 :

1. ಸುಣ್ಣ ಕಲ್ಲು ಶಿಲೆಗಳಿಗಾಗಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಿದೆ.
2. ಸುಣ್ಣ ಶಿಲೆ ಮತ್ತು ಡೋಲೊಮೈಟ್ ಖನಿಜಗಳಿಗಾಗಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ:ಅನ್ವೇಷಣೆ ನಡೆಸಲಾಗಿದೆ.
3. ಡೋಲೋಮೈಟ್ ಖನಿಜಕ್ಕಾಗಿ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ : ಅನ್ವೇಷಣೆ ನಡೆಸಲಾಗಿದೆ.
4. ಕ್ವಾರ್ಟ್ಜ್ ಮತ್ತು ಕೈನೈಟ್ ಖನಿಜಕ್ಕಾಗಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹಾಗೂ ಹೊನ್ನಾಳಿ ತಾಲ್ಲೂಕಿನ ಭಾಗಗಳಲ್ಲಿ ಪ್ರಾದೇಶಿಕ ಸಮೀಕ್ಷೆ : ಅನ್ವೇಷಣೆ ನಡೆಸಲಾಗಿದೆ.